# ಮರ

■ ನರಸಿಂಹಾರೆಡ್ಡಿ ಯಂಕಾಮೋಳ
ಕಲೆ: ಸಂತೋಷ್ ಸಸಿಹಿತ್ಲು

ಬಿಸಿಲಿನ ಝಳಕೆ
ನೆರಳನು ಅರಸಿ
ಮರಗಳ ಹುಡುಕುತ
ಹೊರಟರು ಅವರು

ಬಳಲಿದ ಜೀವದ
ಬಾಯಾರಿಕೆ ತೀರಲು
ನೀರನು ಹುಡುಕುತ
ಹೊರಟರು ಅವರು

ಹಸಿವಿಗೆ ತಾಳದ
ಜೀವರಾಶಿಗಳಿಗಾಗಿ
ಮೇವನು ಹುಡುಕುತ
ಹೊರಟರು ಅವರು

ಕೊಡಲಿಯ ಕಾವಿಗೆ
ಬಲಿಯಾದ ಮರದ
ಬೊಡ್ಡೆಗಳ ಕಂಡು
ಮರುಗಿದರು ಅವರು

ಮರಗಳು ಇದ್ದರೆ
ನೀರೂ ನೆರಳು
ಆಹಾರ, ಬದುಕೆಂದು
ತಿಳಿದರು ಅವರು ■



## ಕುಂಚ ಪ್ರಪಂಚ

ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಎಳೆಯರು ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in







**ನಯನಶ್ರೀ ಎಂ.**
6ನೇ ತರಗತಿ, ಇಂಡಿಯನ್ ಇಂಟರ್‌ನ್ಯಾಷನಲ್ ಶಾಲೆ, ಚಿತ್ರದುರ್ಗ



**ನೇಹಾ ಹುಂಚ**
3ನೇ ತರಗತಿ, ಎಂಇಸಿ ಪಬ್ಲಿಕ್ ಶಾಲೆ, ಯಲಹಂಕ, ಬೆಂಗಳೂರು